ಫೇಸ್‌ಬುಕ್‌ನಲ್ಲಿ ಅವತಾರ್ ಹವಾ!

■ ಶಶಿಕುಮಾರ್ ಸಿ.

ಕಳೆದೊಂದು ವಾರದಿಂದ ಫೇಸ್‌ಬುಕ್‌ನಲ್ಲಿ 'ಅವತಾರ್' ಅನ್ನೋ ಹೊಸ ಫೀಚರ್‌ನ ಸದ್ದು ಜೋರಾಗಿಯೇ ಇದೆ. ವ್ಯಕ್ತಿಯೊಬ್ಬನ ಸಹಜ ಫೋಟೊವನ್ನು ಬಳಸಿಕೊಂಡು ಅದಕ್ಕೆ ಬೇರೆಯದ್ದೇ ರೂಪ ನೀಡುವ ಈ 'ಅವತಾರ್' ವಿಧಾನಕ್ಕೆ ಸಾಕಷ್ಟು ಮಂದಿ ಫೇಸ್‌ಬುಕ್ ಬಳಕೆದಾರರು ಫಿದಾ ಆಗಿದ್ದು, ತಮ್ಮ ತಮ್ಮ ಖಾತೆಗಳಲ್ಲಿ 'ಅವತಾರ್' ರಚಿಸಿ ಕಲರ್‌ಫುಲ್ ಆಗಿ ಕಾಣಿಸಿಕೊಳ್ಳುತ್ತಿದ್ದಾರೆ.

ಬಿಟ್‌ಮೋಜಿ ಮತ್ತು ಆ್ಯಪಲ್ ಮೆಮೊಜಿ ಸ್ಟಿಕರ್ಸ್ ಮಾದರಿಯ ಈ 'ಅವತಾರ್' ರಚಿಸಲು ನೀವು ಫೇಸ್‌ಬುಕ್ ಬಳಕೆದಾರರಾಗಿದ್ದರೆ ಸಾಕು. ಸರಳ ವಿಧಾನದಿಂದ ಕೆಲವೇ ಕ್ಷಣಗಳಲ್ಲಿ ನೀವು ನಿಮ್ಮದೇ 'ಅವತಾರ್' ರಚಿಸಬಹುದು.

ಫೇಸ್‌ಬುಕ್ ಖಾತೆ ಸಕ್ರಿಯವಾಗಿರಬೇಕು. ಬಳಿಕ ಅದನ್ನು ಅಪ್‌ಡೇಟ್ ಮಾಡಿರಬೇಕು. ನಂತರ ಫೇಸ್‌ಬುಕ್ ಆ್ಯಪ್ ತೆರೆದು, ಮೆನುಗೆ (ಮೂರು ಅಡ್ಡಗೆರೆಯ ಆಯ್ಕೆ) ಹೋಗಿ ಸ್ಕ್ರಾಲ್ ಮಾಡಿದರೆ 'ಸೀ ಮೋರ್' ಎಂಬ ಮತ್ತೊಂದು ಆಯ್ಕೆಯು ಕಾಣುತ್ತದೆ. ಅದನ್ನು ಕ್ಲಿಕ್ಕಿಸಿದೊಡನೆ 'ಅವತಾರ್' ಆಯ್ಕೆ ಕಾಣಿಸಿಕೊಳ್ಳುತ್ತದೆ. ಅದನ್ನು ಒತ್ತಿದರೆ, 'ಅವತಾರ್' ಆಯ್ಕೆ ತೆರೆದುಕೊಳ್ಳುತ್ತದೆ.

ಅದರಲ್ಲಿ ನೀವು ನಿಮ್ಮ ಚರ್ಮದ ಬಣ್ಣ, ಕಣ್ಣು, ಕೇಶವಿನ್ಯಾಸ, ಮುಖದ ವಿಧ, ಹುಬ್ಬು, ತುಟಿ, ಮೂಗು, ಹೊಟ್ಟೆಯ ಆಕಾರ ಹೀಗೆ ಇತ್ಯಾದಿ ಆಯ್ಕೆಗಳನ್ನು ಕಾಣಬಹುದು. ಅವುಗಳೆಲ್ಲವನ್ನೂ ಆಯ್ಕೆಮಾಡಿಕೊಂಡ ಬಳಿಕ ಕ್ರಿಯೇಟ್ 'ಅವತಾರ್' ಆಯ್ಕೆ ಕ್ಲಿಕ್ಕಿಸಿದರೆ ನಿಮ್ಮನ್ನೇ ಹೋಲುವ 'ಅವತಾರ್' ರೆಡಿ.

ನಿಮ್ಮ 'ಅವತಾರ್' ಕ್ರಿಯೇಟ್ ಆದ ಬಳಿಕ, ಅವುಗಳನ್ನು ಫೇಸ್‌ಬುಕ್ ಕಮೆಂಟ್, ಪೋಸ್ಟ್, ಸ್ಟೋರೀಸ್, ಪ್ರೊಫೈಲ್ ಪಿಕ್ಚರ್, ಎಮೋಜಿ ಸ್ಟಿಕರ್ಸ್, ಮೆಸೆಂಜರ್ ಮತ್ತು ವಾಟ್ಸ್‌ಆ್ಯಪ್ ಚಾಟ್‌ನಲ್ಲೆಲ್ಲ ಬಳಸಬಹುದು. ಪ್ರಾರಂಭಿಕ ಹಂತವಾಗಿ ಈ ಫೀಚರ್ ವಿಶ್ವದ ಬೇರೆ ದೇಶಗಳಲ್ಲಿ ಈ ಮುಂಚೆಯೇ ಬಿಡುಗಡೆಯಾಗಿತ್ತು. ಅಂತೆಯೇ ಭಾರತದಲ್ಲೂ ಈಚೆಗಷ್ಟೇ ಇದು ಬಿಡುಗಡೆಯಾಗಿ ಹೊಸ ಟ್ರೆಂಡ್ ಅನ್ನು ಹುಟ್ಟುಹಾಕುತ್ತಿದೆ. ■

ವಾಟ್ಸ್‌ಆ್ಯಪ್ ವೆಬ್‌ನಲ್ಲೂ ಡಾರ್ಕ್‌ಮೋಡ್!

ಕಚೇರಿ ಅವಧಿಯಲ್ಲಿ ವಾಟ್ಸ್‌ಆ್ಯಪ್ ಬಳಸಲೇಬೇಕಾದಂತವರು ಹಾಗೂ ಹೆಚ್ಚಾಗಿ ಕಂಪ್ಯೂಟರ್–ಲ್ಯಾಪ್‌ಟಾಪ್ ಅನ್ನು ಹೆಚ್ಚಾಗಿ ಬಳಸುವವರು ವಾಟ್ಸ್‌ಆ್ಯಪ್ ವೆಬ್ ಆಯ್ಕೆಯ ಮೇಲೆ ಹೆಚ್ಚು ಅವಲಂಬಿತರಾಗುತ್ತಾರೆ. ಅಂತವರ ಅನುಕೂಲಕ್ಕೆಂದೇ ವಾಟ್ಸ್‌ಆ್ಯಪ್ ಕಂಪನಿಯೂ ವೆಬ್ ವರ್ಷನ್‌ನಲ್ಲೂ ಡಾರ್ಕ್‌ಮೋಡ್ ಆಯ್ಕೆಯನ್ನು ಪರಿಚಯಿಸಲು ಮುಂದಾಗಿದೆ.

ಕಣ್ಣಿಗೆ ಹಿತ ನೀಡುವ ಡಾರ್ಕ್ ಮೋಡ್; ಹೆಚ್ಚು ಸಮಯ ವಾಟ್ಸ್‌ಆ್ಯಪ್ ಉಪಯೋಗಿಸಿದರೂ ಯಾವುದೇ ಸಮಸ್ಯೆಯಾಗದು. ವಾಟ್ಸ್‌ಆ್ಯಪ್ ವೆಬ್ ಅಪ್ಲಿಕೇಷನ್ ಮಾತ್ರವಲ್ಲದೆ, ವಾಟ್ಸ್‌ಆ್ಯಪ್ ಡೆಸ್ಕ್‌ಟಾಪ್ ಬ್ರೌಸರ್‌ನಲ್ಲೂ ಡಾರ್ಕ್ ಮೋಡ್ ಆಯ್ಕೆಯನ್ನು ನೀಡುತ್ತಿದೆ. ಅಲ್ಲದೆ, ಅನಿಮೇಟೆಡ್ ಸ್ಟಿಕರ್ಸ್ ಕೂಡ ಹೊಸ ಅಪ್‌ಡೇಟ್ ಜತೆಗೆ ಲಭ್ಯವಾಗುತ್ತದೆ.

ವಾಟ್ಸ್‌ಆ್ಯಪ್ ಸ್ಟಿಕರ್ಸ್ ಈಚೆಗೆ ಅತ್ಯಂತ ಹೆಚ್ಚು ಬೇಡಿಕೆ ಪಡೆದುಕೊಂಡಿದ್ದು, ಅದಕ್ಕೆ ಪೂರಕವಾಗಿ ಆಕರ್ಷಕ ಅನಿಮೇಷನ್ ಸಹಿತ ಸ್ಟಿಕರ್ಸ್ ದೊರೆಯುತ್ತದೆ. ಜತೆಗೆ ಹೊಸ ಕ್ಯೂ ಆರ್ ಕೋಡ್ ಆಯ್ಕೆಯನ್ನು ಕೂಡ ವಾಟ್ಸ್‌ಆ್ಯಪ್ ಪರಿಚಯಿಸುತ್ತಿದೆ.

ಆಟೊ ಬ್ಯಾಕ್‌ಅಪ್ ನಿಲ್ಲಿಸಿದ ಗೂಗಲ್

ವಾಟ್ಸ್‌ಆ್ಯಪ್, ಮೆಸೇಂಜರ್, ಇನ್‌ಸ್ಟಾಗ್ರಾಂ, ಸ್ನ್ಯಾಪ್‌ಚಾಟ್‌ಗಳಿಂದ ನಿಮ್ಮ ಸ್ಮಾರ್ಟ್‌ಫೋನ್‌ಗೆ ಬರುವ ಫೋಟೊಗಳನ್ನು ಇನ್ನು ಮುಂದೆ ಆಟೊ ಬ್ಯಾಕ್‌ಅಪ್ ಮಾಡಲಾಗದು ಎಂದು ಗೂಗಲ್ ಫೋಟೊಸ್ ಹೇಳಿದೆ.

ಗೂಗಲ್ ಕಂಪನಿಯು ಗೂಗಲ್ ಫೋಟೊಸ್‌ನ ಡಿಫಾಲ್ಟ್ ಸೆಟ್ಟಿಂಗ್ಸ್‌ನಲ್ಲಿ ಕೆಲವೊಂದು ಬದಲಾವಣೆ ಮಾಡಿದೆ. ಆದರಿಂದಾಗಿಯೇ ಸ್ವಯಂಚಾಲಿತವಾಗಿ ಫೋಟೊಗಳು ಬ್ಯಾಕ್‌ಅಪ್ ಆಗುವುದಿಲ್ಲ. ಅದರ ಬದಲು, ಬಳಕೆದಾರರು ತಮಗೆ ಅಗತ್ಯವಿದ್ದರೆ ಬ್ಯಾಕ್‌ಅಪ್ ಸೆಟ್ಟಿಂಗ್ಸ್ ಅನ್ನು ಬದಲಾಯಿಸಿಕೊಳ್ಳಬಹುದು.

ಸರ್ವೇಜನಃ ಸುಖಿನೋ ಭವಂತುಃ

ಸಮಸ್ಯೆ ನಿಮ್ಮದು ಪರಿಹಾರ ನಮ್ಮದು

ಶ್ರೀ ಸಾಯಿಬಾಬಾ ಉಪಾಸಕರು

ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ ವಶೀಕರಣ ಮಾಂತ್ರಿಕರು ಶ್ರೀಯುತ ಪರಶುರಾಮ್ ಗುರೂಜಿ

ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ

ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ

ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.

ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:

9620444460

ಖಾಯಂ ಮನೆ ವಿಳಾಸ:

ಜೈಬಾಲಾಜಿ ಜ್ಯೋತಿಷ್ಯಂ

ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ಸ್ಟಾಂಡ್‌ದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.

ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮೂಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.